ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ
**ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ ನಡವಳಿಗಳು**

ವಿಷಯ: ಕಾಲೇಜು ಶಿಕ್ಷಣ ಇಲಾಖೆ ವ್ಯಾಪ್ತಿಯ ಖಾಸಗಿ ಅನುದಾನಿತ ಪದವಿ/ಬಿ.ಎಡ್/ಚಿತ್ರಕಲಾ/ಕಾನೂನು ಕಾಲೇಜುಗಳಲ್ಲಿ 2023-24ನೇ ಸಾಲಿನ ಹಾಗೂ ಹಿಂದಿನ ಸಾಲುಗಳಲ್ಲಿ ಕರ್ತವ್ಯ ನಿರ್ವಹಿಸಿ ನಿವೃತ್ತಿ ಹೊಂದಿರುವ ಸಿಬ್ಬಂದಿಗಳಿಗೆ ನಿವೃತ್ತಿ ನಂತರದ ಅಂತಿಮ ಗಳಿಕೆ ರಜೆ ನಗದೀಕರಣ ಸೌಲಭ್ಯಕ್ಕೆ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ: 1.ಸರ್ಕಾರದ ಆದೇಶ ಸಂಖ್ಯೆ: ಇಡಿ : 85 : ಹೆಚ್ ಪಿ ಸಿ 2023 ದಿ :13.02.2024
2.ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯ ಆರು ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಂದ ವಿವಿಧ ದಿನಾಂಕಗಳಂದು ಸ್ವೀಕೃತವಾಗಿರುವ ಅನುದಾನ ಕೋರಿಕೆಗಳು.

*****

ಪ್ರಸ್ತಾವನೆ,

ಕಾಲೇಜು ಶಿಕ್ಷಣ ಇಲಾಖೆಯ ಕಾಲೇಜು ಶಿಕ್ಷಣ ಇಲಾಖೆಯ ಆರು ಪ್ರಾದೇಶಿಕ ಜಂಟಿ ನಿರ್ದೇಶಕರುಗಳ ವ್ಯಾಪ್ತಿಯ ಖಾಸಗಿ ಅನುದಾನಿತ ಪದವಿ/ಬಿ.ಎಡ್/ಚಿತ್ರಕಲಾ/ಕಾನೂನು ಕಾಲೇಜುಗಳಲ್ಲಿ 2023-24ನೇ ಸಾಲಿನ ಹಾಗೂ ಹಿಂದಿನ ಸಾಲುಗಳಲ್ಲಿ ಕರ್ತವ್ಯ ನಿರ್ವಹಿಸಿ ನಿವೃತ್ತಿ ಹೊಂದಿರುವ ಸಿಬ್ಬಂದಿಗಳಿಗೆ ಅಂತಿಮ ಗಳಿಕೆ ರಜೆ ನಗದೀಕರಣ ಸೌಲಭ್ಯಕ್ಕೆ ಅನುದಾನವನ್ನು ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಅದರಂತೆ ಉಲ್ಲೇಖ (1)ರ ಸರ್ಕಾರದ ಪತ್ರದಲ್ಲಿ ಅನುದಾನ ಬಿಡುಗಡೆ ಮಾಡಿ ನಿಯಮಾನುಸಾರ ಬಳಕೆ ಮಾಡಲು ಅನುಮತಿ ನೀಡಲಾಗಿದೆ.

ಅದರಂತೆ ಉಲ್ಲೇಖ (02)ರ ಇಲಾಖಾ ವ್ಯಾಪ್ತಿಯ ಆರು ಜಂಟಿ ನಿರ್ದೇಶಕರುಗಳು ಅಂತಿಮ ಗಳಿಕೆ ರಜೆ ನಗದೀಕರಣ ಸೌಲಭ್ಯಕ್ಕೆ 2023-24ನೇ ಸಾಲಿನ ಹಾಗೂ ಹಿಂದಿನ ಸಾಲುಗಳಲ್ಲಿ ಅನುಮೋದನೆಗೊಂಡಿರುವ ಬಿಲ್ಲುಗಳಿಗೆ ಅವಶ್ಯವಿರುವ ಅನುದಾನಕ್ಕಾಗಿ ಪ್ರಸ್ತಾವನೆ ಸಲ್ಲಿಸಿದ್ದು, ಅದರಂತೆ ಅನುದಾನ ಬಿಡುಗಡೆ ಮಾಡಲು ಆದೇಶ

ಆದೇಶ ಸಂಖ್ಯೆ : DCE/BUD/GEN/36/2023, ದಿನಾಂಕ:14.02.2024.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಕಾಲೇಜು ಶಿಕ್ಷಣ ಇಲಾಖೆ ವ್ಯಾಪ್ತಿಯ ಖಾಸಗಿ ಅನುದಾನಿತ ಪದವಿ/ಬಿ.ಎಡ್/ಚಿತ್ರಕಲಾ/ಕಾನೂನು ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸಿ ನಿವೃತ್ತಿ ಹೊಂದಿರುವ ಸಿಬ್ಬಂದಿಗಳಿಗೆ ನಿವೃತ್ತಿ ನಂತರದ ಅಂತಿಮ ಗಳಿಕೆ ರಜೆಗಳನ್ನು ನಗದೀಕರಿಸಿ ಪಾವತಿಸಲು ಲೆಕ್ಕ ಶೀರ್ಷಿಕೆ: 2071-01-109-1-02-251 ರಡಿ ಸಂಬಂಧಪಟ್ಟ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ಅನುದಾನವನ್ನು ಈ ಕೆಳಕಂಡ ವಿವರಗಳಂತೆ ಬಿಡುಗಡೆ ಮಾಡಲಾಗಿದೆ.

(ರೂಪಾಯಿಗಳಲ್ಲಿ)

| ಕ್ರ.ಸಂ | ಪ್ರಾದೇಶಿಕ ಕಛೇರಿ | ಡಿಡಿಓ ಸಂಖ್ಯೆ | ಬಿಡುಗಡೆ ಮಾಡಿರುವ ಅನುದಾನ |
|---|---|---|---|
| 1 | ಪ್ರಾದೇಶಿಕ ಕಛೇರಿ ಬೆಂಗಳೂರು | 180460 | 34,09,24,324.00 |
| 2 | ಪ್ರಾದೇಶಿಕ ಕಛೇರಿ ಮೈಸೂರು | 180500 | 12,74,09,263.00 |
| 3 | ಪ್ರಾದೇಶಿಕ ಕಛೇರಿ ಶಿವಮೊಗ್ಗ | 183510 | 5,42,31,945.00 |
| 4 | ಪ್ರಾದೇಶಿಕ ಕಛೇರಿ ಮಂಗಳೂರು | 180780 | 10,80,13,285.00 |
| 5 | ಪ್ರಾದೇಶಿಕ ಧಾರವಾಡ | 180890 | 27,95,04,163.00 |
| 6 | ಪ್ರಾದೇಶಿಕ ಕಛೇರಿ ಕಲಬುರಗಿ | 180930 | 7,99,22,238.00 |
| | | ಒಟ್ಟು ರೂ | 99,00,05,218.00 |

(ಒಟ್ಟು ಮೊತ್ತ ರೂ. ತೊಂಬತ್ತೊಂಬತ್ತು ಕೋಟಿ ಐದುಸಾವಿರದ ಎರಡುನೂರ ಹದಿನೆಂಟು ರೂಪಾಯಿಗಳು ಮಾತ್ರ)

ಮೇಲಿನ ವಿವರಗಳಂತೆ ಬಿಡುಗಡೆ ಮಾಡಿರುವ ಅನುದಾನವನ್ನು ನಿಯಮಾನುಸಾರ ಬಳಕೆ ಮಾಡಲು ಅನುಮತಿ ನೀಡಲಾಗಿದೆ.

ಕಾಲೇಜು ಶಿಕ್ಷಣ ಆಯುಕ್ತರು

ಷರತ್ತುಗಳು :

1) ಜಂಟಿ ನಿರ್ದೇಶಕರುಗಳಿಂದ ಸ್ವೀಕೃತವಾಗಿರುವ ಬೇಡಿಕೆಯಂತೆ ಅನುದಾನ ಬಿಡುಗಡೆ ಮಾಡಲಾಗಿದೆ. ಅನುದಾನ ಸಂಪೂರ್ಣವಾಗಿ ಬಳಕೆ ಮಾಡಿ ದಿನಾಂಕ 25.02.2024ರ ಒಳಗಾಗಿ ಬಳಕೆ ಪ್ರಮಾಣಪತ್ರ ಸಲ್ಲಿಸುವುದು.

2) ನಿವೃತ್ತಿ ನಂತರದ ಅಂತಿಮ ಗಳಿಕೆರಜೆ ನಗದೀಕರಣ ಮೊತ್ತ ಪಡೆಯಲು ಅರ್ಹರಿರುವ ಎಲ್ಲಾ ನೌಕರರಿಗೂ ಸದರಿ ಮೊತ್ತ ಪಾವತಿಸಲು ಜಂಟಿ ನಿರ್ದೇಶಕರ ಕಛೇರಿಯಲ್ಲಿ ಅಗತ್ಯ ಕ್ರಮವಹಿಸುವುದು. ಅರ್ಹ ನೌಕರರ ಬಿಲ್ ಅನ್ನು ತುರ್ತಾಗಿ ಅನುಮೋದನೆ ಮಾಡಿ ಹೆಚ್ಚುವರಿ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸುವುದು. ಹೆಚ್ಚುವರಿ ಅನುದಾನ ಕೋರುವಾಗ ಈಗಾಗಲೇ ಬಿಡುಗಡೆ ಮಾಡಿರುವ ಅನುದಾನ ಶೇಕಡಾ ನೂರರಷ್ಟು ಬಳಕೆ ಮಾಡಿ ಬಳಕೆ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

3) ನಿವೃತ್ತಿ ನಂತರದ ಅಂತಿಮ ಗಳಿಕೆ ರಜೆ ನಗದೀಕರಣ ಪಾವತಿ ಸಂಬಂಧ ಜಂಟಿ ನಿರ್ದೇಶಕರ ಕಛೇರಿ ಹಾಗೂ ನಿವೃತ್ತಿ ಹೊಂದಿದ ಕಾಲೇಜುಗಳಲ್ಲಿ ಪ್ರತ್ಯೇಕ ಬಟವಾಡೆ ಪುಸ್ತಕವನ್ನು ನಿರ್ವಹಿಸುವುದು

4) ಜಂಟಿ ನಿರ್ದೇಶಕರ ಕಛೇರಿಯಲ್ಲಿ ನಿವೃತ್ತಿ ಹೊಂದಿದ ದಿನಾಂಕದ ಜೇಷ್ಠತೆ ಪರಿಗಣಿಸಿ ಬಿಲ್ ಅನುಮೋದನೆ ಮಾಡುವುದು. ನೌಕರರು ಮೃತರಾಗಿದ್ದಲ್ಲಿ ಅಥವಾ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದ್ದಲ್ಲಿ ಆದ್ಯತೆ ಮೇರೆಗೆ ಬಿಲ್ ಅನುಮೋದನೆಗೆ ಕ್ರಮವಹಿಸುವುದು.

5) ಅರ್ಹ ನೌಕರರುಗಳಿಗೆ ಸಕಾಲದಲ್ಲಿ ಆರ್ಥಿಕ ಸೌಲಭ್ಯಗಳು ಪಾವತಿಯಾಗದೇ ನ್ಯಾಯಾಲಯಗಳಲ್ಲಿ ದೂರು ದಾಖಲಾದಲ್ಲಿ ನ್ಯಾಯಾಲಯವು ವಿಧಿಸುವ ದಂಡದ ಮೊತ್ತ / ಬಡ್ಡಿಯ ಮೊತ್ತವನ್ನು ಸಂಬಂಧಪಟ್ಟ ಅಧಿಕಾರಿಗಳು/ಸಿಬ್ಬಂದಿಗಳಿಂದಲೇ ವಸೂಲಿ ಮಾಡಲಾಗುವುದು. ಈ ಬಗ್ಗೆ ಪ್ರಾದೇಶಿಕ ಕಛೇರಿಯ ಎಲ್ಲಾ ನೌಕರರುಗಳಿಗೆ ಹಾಗೂ ಕಛೇರಿ ವ್ಯಾಪ್ತಿಯ ಎಲ್ಲಾ ಆಡಳಿತ ಮಂಡಳಿಗಳು / ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಪ್ರಾಂಶುಪಾಲರುಗಳಿಗೆ ಸೂಕ್ತ ತಿಳುವಳಿಕೆ ನೀಡುವುದು.

6) ನೌಕರರು ಮೃತರಾಗಿದ್ದಲ್ಲಿ ಸೇವಾಪುಸ್ತಕವನ್ನು ಪರಿಶೀಲಿಸಿ ಕಾನೂನುಬದ್ಧ ವಾರಸುದಾರರಿಗೆ ಪಾವತಿಗೆ ಕ್ರಮವಹಿಸುವುದು.

7) ಜಂಟಿ ನಿರ್ದೇಶಕರ ಕಛೇರಿ ಹಂತದಲ್ಲಿ ಈಗಾಗಲೇ ಅನುಮೋದನೆಗೊಂಡಿರುವುದರಿಂದ ಮತ್ತೊಮ್ಮೆ ಕಾಲೇಜಿನಿಂದ ಮಾಹಿತಿ ಪಡೆಯದೇ ಪಾವತಿಗೆ ಕ್ರಮವಹಿಸುವುದು. ಅನಗತ್ಯ ವಿಳಂಬ ಮಾಡಿರುವ ಬಗ್ಗೆ ದೂರು ಸ್ವೀಕೃತವಾದಲ್ಲಿ ಸಂಬಂದಪಟ್ಟವರ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಲಾಗುವುದು.

8) ನಿವೃತ್ತ ನೌಕರರಿಂದ ಸರ್ಕಾರಕ್ಕೆ ಯಾವುದೇ ಬಾಕಿ ಇದ್ದಲ್ಲಿ ಸದರಿ ಮೊತ್ತವನ್ನು ಕಟಾಯಿಸಿ ಪಾವತಿಸತಕ್ಕದ್ದು.

ಕಾಲೇಜು ಶಿಕ್ಷಣ ಆಯುಕ್ತರು

ಇವರಿಗೆ :

1. ಲೆಕ್ಕಾಧಿಕಾರಿಗಳು, ಹಣ ಮತ್ತು ಪಾವತಿ ವಿಭಾಗ ಕಾ.ಶಿ.ಇ ಕೇಂದ್ರ ಕಛೇರಿ, ಬೆಂಗಳೂರು.
2. ಜಂಟಿ ನಿರ್ದೇಶಕರು, ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ, ಬೆಂಗಳೂರು / ಮೈಸೂರು / ಶಿವಮೊಗ್ಗ / ಮಂಗಳೂರು / ಧಾರವಾಡ / ಕಲಬುರಗಿ

ಪ್ರತಿಗಳು :

1. ಸಂಬಂಧಪಟ್ಟ ಖಜಾನಾಧಿಕಾರಿಗಳು- ಮಾಹಿತಿಗಾಗಿ
2. ಮ್ಯಾನೇಜರ್/ಅಧೀಕ್ಷಕರು ಮಾಹಿತಿ ತಂತ್ರಜ್ಞಾನ ವಿಭಾಗ ಕೇಂದ್ರ ಕಛೇರಿ ಬೆಂಗಳೂರು
3. ಕಛೇರಿ ಪ್ರತಿ

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2023-24ನೇ ಆಯವ್ಯಯ ಸಾಲಿನಲ್ಲಿ ಕಾಲೇಜು ಶಿಕ್ಷಣ ಇಲಾಖೆ ವ್ಯಾಪ್ತಿಯ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಸಹಾಯಾನುದಾನ ನೌಕರರಿಗೆ ಅಂತಿಮವಾಗಿ ಲಭ್ಯವಾಗುವ ರಜೆ ನಗದೀಕರಣದ ಮೊತ್ತವನ್ನು ಪಾವತಿಸಲು ಅನುದಾನ ಬಿಡುಗಡೆ ಮಾಡುವ ಕುರಿತು

ಓದಲಾಗಿದೆ:-

1. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪ್ರಸ್ತಾವನೆ ಸಂಖ್ಯೆ: DCE/BUD/GEN/32/2023.
2. ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 46 ವೆಚ್ಚ-8/2022, ದಿನಾಂಕ: 06.02.2024.

ಪ್ರಸ್ತಾವನೆ:-

ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ಪ್ರಸ್ತಾವನೆಯಲ್ಲಿ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು 2022-23 ಮತ್ತು 2023-24ನೇ ಸಾಲಿನಲ್ಲಿ ಕಾಲೇಜು ಶಿಕ್ಷಣ ಇಲಾಖೆ ವ್ಯಾಪ್ತಿಯ ಖಾಸಗಿ ಅನುದಾನಿತ ಪದವಿ, ಬಿ.ಎಡ್ ಮತ್ತು ಚಿತ್ರಕಲಾ ಕಾಲೇಜುಗಳ ಬೋಧಕರುಗಳು ಮತ್ತು ಬೋಧಕೇತರರಿಗೆ ನಿವೃತ್ತಿ ನಂತರದ ಗಳಿಕೆ ರಜೆ ನಗದೀಕರಣ ಸೌಲಭ್ಯವನ್ನು ಲೆಕ್ಕ ಶೀರ್ಷಿಕೆ : 2071-01-109-1-02(251) "ಸಹಾಯಾನುದಾನದ ನೌಕರರಿಗೆ ಅಂತಿಮವಾಗಿ ಲಭ್ಯವಾಗುವ ರಜೆ ನಗದೀಕರಣ ಸೌಲಭ್ಯಗಳು" ರಡಿಯಲ್ಲಿ ಅಗತ್ಯ ಇರುವ ರೂ 22815.07 ಲಕ್ಷಗಳ ಅನುದಾನವನ್ನು ಖಜಾನೆ-2 ರಲ್ಲಿ (CO CODE 02841-O) ಅನುದಾನ ಬಿಡುಗಡೆ ಮಾಡಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಕ್ರಮಾಂಕ (2)ರಲ್ಲಿ ಓದಲಾದ ಆರ್ಥಿಕ ಇಲಾಖೆಯ ಟಿಪ್ಪಣಿಯಲ್ಲಿ ತಿಳಿಸಿರುವಂತೆ, 2022-23 ಹಾಗೂ 2023-24ನೇ ಸಾಲಿನಲ್ಲಿ ಕಾಲೇಜು ಶಿಕ್ಷಣ ಇಲಾಖೆ ವ್ಯಾಪ್ತಿಯ ಖಾಸಗಿ ಅನುದಾನಿತ ಪದವಿ, ಬಿ.ಎಡ್ ಮತ್ತು ಚಿತ್ರಕಲಾ ಕಾಲೇಜುಗಳಲ್ಲಿ ನಿವೃತ್ತಿ ಹೊಂದಿದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ನಿವೃತ್ತಿ ನಂತರದ ಗಳಿಕೆ ರಜೆ ನಗಧೀಕರಣಕ್ಕೆ ರೂ.136,95,07,000.00 ಮತ್ತು ಸೇವಾ ಉಪದನ ಪಾವತಿಗಾಗಿ ರೂ.91,20,00,000.00 ಒಟ್ಟು ರೂ. 228,15,07,000.00 ಗಳನ್ನು 2023-24ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ : 2071-01-109-1-02-Terminal Leave Encashment and DCRG Benefits for Grant-in-Aid-Employees ರ ಉಪ ಲೆಕ್ಕ ಶೀರ್ಷಿಕೆ:251 ರಡಿ ಒದಗಿಸಲಾಗಿದೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 85 ಹೆಚ್‌ಪಿಸಿ 2023,**
**ಬೆಂಗಳೂರು, ದಿನಾಂಕ: 13ನೇ ಫೆಬ್ರುವರಿ, 2024.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, 2022-23 ಹಾಗೂ 2023-24ನೇ ಸಾಲಿನಲ್ಲಿ ಕಾಲೇಜು ಶಿಕ್ಷಣ ಇಲಾಖೆ ವ್ಯಾಪ್ತಿಯ ಖಾಸಗಿ ಅನುದಾನಿತ ಪದವಿ, ಬಿ.ಎಡ್ ಮತ್ತು ಚಿತ್ರಕಲಾ ಕಾಲೇಜುಗಳಲ್ಲಿ ನಿವೃತ್ತಿ ಹೊಂದಿದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ನಿವೃತ್ತಿ ನಂತರದ ಗಳಿಕೆ ರಜೆ ನಗಧೀಕರಣಕ್ಕೆ ರೂ.136,95,07,000.00 ಮತ್ತು ಸೇವಾ ಉಪದನ ಪಾವತಿಗಾಗಿ ರೂ.91,20,00,000.00 ಒಟ್ಟು ರೂ. 228,15,07,000.00 ಗಳನ್ನು 2023-24ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ : 2071-01-109-1-02-Terminal Leave

Encashment and DCRG Benefits for Grant-in-Aid-Employees ರ ಉಪ ಲೆಕ್ಕ ಶೀರ್ಷಿಕೆ:251 ರಡಿ ಒದಗಿಸಿ ಬಿಡುಗಡೆಗೊಳಿಸಿ ಆದೇಶಿಸಿದೆ.

ಷರತ್ತುಗಳು:-

1. ಸದರಿ ಅನುದಾನವನ್ನು ಪ್ರಸಕ್ತ ಸಾಲಿನಲ್ಲೇ ಕಡ್ಡಾಯವಾಗಿ ವೆಚ್ಚಗೊಳಿಸತಕ್ಕದ್ದು.
2. ಈ ಅನುದಾನವನ್ನು ಯಾವ ಉದ್ದೇಶಕ್ಕಾಗಿ ಒದಗಿಸಿದೆಯೋ ಅದೇ ಉದ್ದೇಶಕ್ಕಾಗಿ ಮಾತ್ರ ಬಳಸತಕ್ಕದ್ದು;
3. ಈ ಅನುದಾನವನ್ನು ಸರ್ಕಾರದಿಂದ ಅನುಮತಿ ಪಡೆದ ಹುದ್ದೆಗಳಿಗೆ ಮಾತ್ರ ನಿಯಮಗಳನ್ವಯ ಪರಿಶೀಲಿಸಿ ಬಿಡುಗಡೆಗೊಳಿಸುವುದು.
4. ಬಿಡುಗಡೆಗೊಳಿಸಿರುವ ಅನುದಾನಕ್ಕೆ ಕಡ್ಡಾಯವಾಗಿ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.
5. ಅನುದಾನ/ವೇತನ ಬಿಡುಗಡೆ ನಿಯಮಾನುಸಾರ ಕೈಗೊಳ್ಳುವುದು ಹಾಗೂ ಪುನರಾವರ್ತನೆ ಆಗದಂತೆ ಕ್ರಮವಹಿಸುವುದು;

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 46 ವೆಚ್ಚ-8/2022, ದಿನಾಂಕ: 06.02.2024ರಲ್ಲಿ ನೀಡಿರುವ ಸಹಮತಿಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಹಾಗೂ ಅವರ ಹೆಸರಿನಲ್ಲಿ,

ಎನ್. ಕುಮಾರ್ 13/2/24.
(ಎನ್.ಕುಮಾರ್)
ಸರ್ಕಾರದ ಉಪ ಕಾರ್ಯದರ್ಶಿ
(ತಾಂತ್ರಿಕ ಶಿಕ್ಷಣ ಮತ್ತು ಯೋಜನೆ)
ಉನ್ನತ ಶಿಕ್ಷಣ ಇಲಾಖೆ.

13/02

ರವರಿಗೆ:-

1. ಪ್ರಧಾನ ಮಹಾಲೇಖಪಾಲರು, ಕರ್ನಾಟಕ (ಆಡಿಟ್ 1 ಮತ್ತು 2), ಬೆಂಗಳೂರು.
2. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
4. ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, ಬೆಂಗಳೂರು.
5. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
6. ಅಪರ ನಿರ್ದೇಶಕರು, ಟಿಎನ್‌ಎಂಸಿ, ಖನಿಜಭವನ, ಬೆಂಗಳೂರು.
7. ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ.
8. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು.
9. ಸರ್ಕಾರದ ಜಂಟಿ ಕಾರ್ಯದರ್ಶಿ (ಎಫ್‌ಆರ್ ಮತ್ತು ಬಿಸಿಸಿ), ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
10. ವಿಶೇಷಾಧಿಕಾರಿ, ಇ-ಆಡಳಿತ ಘಟಕ, ಉನ್ನತ ಶಿಕ್ಷಣ ಇಲಾಖೆ (ಅಂತರ್ಜಾಲದಲ್ಲಿ ಪ್ರಕಟಿಸಲು)
11. ಶಾಖಾ ರಕ್ಷಾ ಪ್ರತಿ/ಹೆಚ್ಚುವರಿ ಪ್ರತಿಗಳು.